ಜನಗಳು ಅಂದ್ರು. 'ಈ ಕಾಡು ಸೀಗೆ ಮೆಳೆಲಾದ್ರೆ ಯಾವ ಜನವೂ ಇಲ್ಲ. ಇಲ್ಲೇ ಉಳ್ಕಳಿ. ಸೀಗೇದ ಗುಡ್ಡದ ಮ್ಯಾಲೆ ಮಳೆಮಲ್ಲಪ್ಪ ಆಗಲೆ ಹತ್ತೊಗಿ ಅಲ್ಲಿ ನೆಲೆಯಾಗವ್ನೆ, ಅಲ್ಲೋಗಿ ಏನ್ ಮಾಡತೀರಿ' ಅಂದ್ರು, ಆ ಕೊಂಡಜ್ಜಿ ಜನ.

ಇವನು ಸಿಂತೆ ಹಚ್ಕಂಡು ಅಣ್ಣನ ಮಾತ ಮೀರೋದುಂಟೇ? ನೋಡಣ, ಅಂತ ತಲೆ ಕೆಡಿಸ್ಕಂಡು, ಹೆಂಡತಿಯ 'ಬೆಂಕಿ ತರೋಗು. ಭಂಗಿ ಸೇದಬೇಕು' ಅಂದ. ಭಂಗಿಸೊಪ್ಪು ಅಲ್ಲಿ ಬಾಳ ಬೆಳದಿತ್ತು. ಬೆಂಕಿ ಕಾಯ್ತಾ ಕುಂತ. ಅಲ್ಲಿ ಸುತ್ತುಮುತ್ತ್ಲು ಜನ ಇವತ್ತಿಗೂ ಭಂಗಿ ಸೇದ್ತರೆ. ಅಲ್ಲಿ ಭಂಗಿ ಸೊಪ್ಪು ಅದಾಗದೆ ಬೆಳದಿರ್ತೀತೆ.

ಅವನ ಹೆಂಡತಿ ಬೆಂಕಿ ಹುಡುಕ್ಕಂಡು ಹೋದ್ಲು... ಹೋದ್ಲು. ಅಲ್ಲೊಂದು ಕೇರಿ ಇತ್ತು. ಅಲ್ಲಿ ದನಿನ ಬಾಡ ಕುಯ್ದಾಕವ್ರೆ. ಸಂದೆ ಸೂರಪ್ಪ ಇಳದೋತಾ ಈತೆ, ಸೀಗೇ ಕೆರೇಲಿ. ಆ ರಂಗಿನ ಬಣ್ಣದಲ್ಲಿ ದನಿನ ಬಾಡು ಅನ್ನೋದು ಏನು, ಕೆಂಪುಗೆ ಕೆಂಡದಂಗೆ ಕನಿತಾ ಈತೆ. ಬೆರಗಾಗಿ ಆಸೆ ಆಗೋತು. ಅದ ಈಸ್ಕಂಡು ಉಂಡೋಳೆಯ ಮೈ ಮರತ್ಲು. ವಸಿ ಹೊತ್ತು ಕುಂತಕಂದ್ಲು. ಆಮೇಲೆ ಧಡಬಡನೆ ಇವ್ಳು ಸೀಗೇಕೆರೇಲಿ ಮೈ ತೊಳಕಂಡು ಗಂಡ ಇದ್ದ ಕಡಿಗೆ ಬೆಂಕಿ ತಗಂಡು ಓಡಿ ಬಂದ್ಲು. ಅವನೂವೆ ಸೀಗೇ ಕೆರೇಲಿ ಮೈಕೈ ತೊಳಕ ಬಂದೋನು ಸಿಟ್ಟತ್ತಿ ಕುದಿತ ಕುಂತವ್ನೆ.

ಹೆಂಡತಿ ಬೆಂಕಿ ಕೊಟ್ಳು. ಸಿಟ್ಟಾಗಿ ಕುಂತಿದ್ನಲ್ಲ! ಝಾಡಿಸಿ ಒದ್ದ. ಅವಳ ಸೊಂಟ ಮುರುದು ಹೋಗಿ ಅಲ್ಲೇ ಬಿದ್ದಕಂಡ್ಲು. ಇವನು ಕುಂತು ಮೈ ಮರತು ಭಂಗಿ ಸೇದಿ ಮುಂದಕೆ ಹ್ವಾದ. ಅವಳ ತಿರುಗೂ ನೋಡ್ಲಿಲ್ಲ, ಒಂದು ಮೈಲಿ ದೂರ ಹೋಗಿ ಸೀಗೆ ಕೆರೆ ಏರಿ ಇಳುದು ಬೆಟ್ಟದ ಪಾದಕ್ಕೆ ಬಂದಿದ್ದ. ಇನ್ನೂ ಬೆಟ್ಟ ಹತ್ತೇ ಇಲ್ಲ. ಆಗಳೇ! ಶಂಖದ ಕೂಗು ಕೇಳೇ ಬುಡತು. ಅವ್ನು ಕೊಂಡಜ್ಜೀಲೆ ಒಡಮೂಡಕಂದ.

ಕಳೆದ ವಾರದ 'ಚೆನ್ನುಡಿ'
**ಹೋಯ್ ಕುಂದಾಪ್ರದವ್ರ ಯಾವ ಬದಿಯವ್ರ್?**
**ಕೇಳಿ ರೂಪಾ ಕೆ.ಎಂ.**
**ಅವರ ಧ್ವನಿಯಲ್ಲಿ**

ಪಾಡ್‌ಕಾಸ್ಟ್ ಕೇಳಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.



ಗಂಡ ಹೆಂಡತಿ ಇಬ್ರಾಳು ಮತ್ತೆ ಸೇರನೇ ಇಲ್ಲ. ಇವನು ಅಲ್ಲೇ ನೆಲೆ ನಿಂತಕಂದ. ಇವಳು ಮೈಲಿ ದೂರದಲ್ಲಿ ಇಲ್ಲೆ ಸೊಂಟ ಮುರ್ಕಂಡು ಬಿದ್ಕಂಡ್ಲು. ಇವತ್ತೂ ಅಲ್ಲೇ ಬಿದ್ದವ್ಳೆ.

ಅದಾದ ಮೇಲೆ 'ಅಲಘನಾಥ ಸ್ವಾಮಿ' ಬೆಳೆದ, ಬೆಳೆದ, ಏನು ಅಂಥ ಚಂದೊಳ್ಳಿ ಗಂಡು. ಹದಿನೆಂಟು ಅಡಿ ಬೆಳೆದ. ಮುಂದಲ್ಲ ಅವನ ನೋಡಬೇಕಾದ್ದು. ಅವನ ಹಿಂಭಾಗನೂ ನೋಡೊ ಹಂಗೆ ಅಟ್ಟೆ ಕಟ್ಟವ್ರೆ. ಬೆನ್ನು, ಸೊಂಟ, ಅಂಡು ಕುಂಡೆ, ತೊಡೆ ಎಲ್ಲ ಹೆಂಗವೆ ಅಂತೀಯಾ... ನಾ ನೋಡಿದ್ದೀನಲ್ಲ! ಆಗಿನೋರು ಊರ ಜನ ಇದ ಕಂಡದ್ದೆ ಹೆದರರೋದ್ರು.



ಆಕಾಶದುದ್ದ ಆಗೋದ್ರೆ ಮಳೆ ಇಲ್ಲದಂಗೆ ಆಗಬುಟ್ರೆ ಅಂತ ಒಬ್ಬ ಆಚಾರಿಯ ಕರಕಬಂದು ಅವನ ತಲೆ ಮೇಲೆ ಮೊಳೆ ಹೊಡಸುದ್ರು. ಆಗವನು ಅಲ್ಲೇ ತಟಸ್ಥ ಆಗಿ ನಿಂತೋದನಂತೆ.

ಅಷ್ಟಾಳು... ಯಾವ ತಾಯಿ ಹೆತ್ತ ಮಕ್ಳೋ... ಒಂತಾಯಿ ಮಕ್ಳೆಯ... ಒಬ್ರಿಗಿಂತ ಒಬ್ರು ಚಂದೊಳ್ಳಿ ಚೆಲುವ್ರು! ಮಾತ್ರವ ಕಷ್ಟವಾನಿಗಳು... ಬೇಕಾದ್ರೆ ನೋಡಿ ನೀವು. ಶಂಖ ಹೂಡಿ, ಜಾಗಟೆ ಹೊಡುದೆಯ ಗೋವಿಂದಾ ಗೋವಿಡ ಅಂತ ಬೊಬ್ಬೆ ಹೊಡೆದು ಇವ್ರೆಲ್ಲರನ್ನು ಎಚ್ಚರಸ್ಬೇಕು. ಎಬ್ಬುಸ್ಬೇಕು. ಯಾವ ಹೊತ್ತಿಗೂವೆ ಊದುಬತ್ತಿ ಮಂಗ್ಳಾರತೀಲಿ, ಉಹೂಂ! ಇವ್ರು ಎಚ್ಚರಾಕ್ಕಲ್ಲ! ಅಂತೀನಿ.

ಕಥೆ ಕೇಳುಸ್ಕಂಡ ಒಬ್ರಿಗೇ ಅಲ್ಲ... ಅಲ್ಲಿ ಕೂತಿರೋರ್ಗೆಲ್ಲ ಜೋರಾಗಿ ನಗು ಬಂತು.

'ದೇವ್ರುಗೂ ಸಂಚಾರ ಮಾಡಸ್ಬುಟ್ಟಿಲ್ಲವ್ವ ನೀನು?' ನಗಾಡತಾ ಅಂದ ಮಾತಿಗೆ...

'ಇಲ್ ಕೇಳೆ ಮಗ, ನಾವು ಈ ಜೀವ ಹೊತ್ಕಂದು ನಡದು ಎಂದಾದರೂ ಗುರಿ ಮುಟ್ಟದೀವಾ... ಆ ಶಂಖದ ನಾದ ಬಂದಾಗ ಯಾರೇ ಆದ್ರೂ ಬುಟ್ಟು ಹೋಗ್ಲೇಬೇಕು ಅಲ್ಲವ!'

ಈಗ ನೋಡು, ನಮ್ಮ ಕೆಳ್ಳಕೇರಿಲಿ ಮೂರಾಳು ಅಣ್ಣಮ್ರು ಒಂದೇ ಕಡೆ ಮನೆ ಮಾಡ್ಕಂಡ್ರು. ಬಾಳಿ ಬದುಕಿದ್ರು. ಒಂತಾಯಿ ಮಕ್ಳು. ಈಗ ಮಕ್ಕಳ ಕಾಲಕ್ಕೆ... ಮೊಮ್ಮಕ್ಕಳ ಕಾಲಕ್ಕೆ...

ನಮ್ಮ ಪಟೇಲಣ್ಣರ ಮನೇಲಿ... ನೋಡಿ, ಇವರು ಇದ್ಕೆ ಅಂತ ಕಲಿಲಾಗಿ ಒಂತಾಯಿ ಮಕ್ಳು ಒಂದೇತಾವ ಇದಾವಾ? ಇಲ್ಲ! ರಾಜಣ್ಣ ಬೆಂಗಳೂರು ಬಿದ್ದ. ಎರಡನೇನು ಕಾಫಿ ತ್ವಾಟಕ್ಕೆ ಬಿದ್ದ. ಮೂರ್ನೇನು ಅದ್ಯಾವುದೋ ಕೆಲಸದಲ್ಲಿದ್ದೋನು ಈಗ ಬಂದು ಯಗಚಿ ಸಾಲಲ್ಲಿ ತ್ವಾಟ ಮಾಡುದ. ಕೊನೇನು ಕೆಲಸಕ್ಕೆ ಅಂತ ಹ್ವಾದ್ರೂ... ಇಲ್ಲೆ... ಬಂದು ನೆಲೆಯಾದ. ಇವ್ರಕ್ಕ ಮೈಸೂರು ಸೇರುದ್ಲ. ಇನ್ನೊಬ್ಬಕ್ಕ ಬೆಂಗಳೂರಲ್ಲಿ ನೆಲೆ ಆದ್ಲ.

ಈ ಮಣಿಮಗ ಎಲ್ಲಿಗೆ ಸೇರುತ್ತೋ... ಯಾರಿಗ್ಗೊತ್ತು? ವಿದ್ಯೆ, ಬುದ್ಧಿ, ದುಡ್ಡು ಮನುಷ್ಯನ್ನ ಇದ್ದ ಕಡೆ ಇರಕ್ಕೆ ಬಿಡೋದುಂಟಾ? ನೀವೇ ಹೇಳಿ? ಹಂಗೆ ತಿಮ್ಮಪ್ಪನ್ನ ಅಣ್ತಮ್ಮರು ಯಾವ್ಯಾವ ಇದ್ಕೆ ಕಲ್ತಿದ್ರೋ ಯಾರಗ್ಗೊತ್ತು... ಒಳ್ಳೇದೋ, ಕೆಟ್ಟದ್ದೋ.. ಯಾವುದೇ ಆದ್ರೂ ಅದು ಅವರ ಬದುಕಿನ ದಿಕ್ಕು ಅನ್ನದು ಮಾತ್ರ ನಿಜ!

ಕಥೆಯ ಒಗಟನ್ನು ಆ ಅವ್ವ ಅಲ್ಲೇ ಬಿಡಿಸಿಕೊಟ್ಬಾಗ ನಾನೂ ಯೋಚಸ್ತಾ ಕೂತೆ. ಎಲ್ಲರೂ ಅತ್ತಿಗೆ ಕಾಫಿ ತಂದು ಕೊಡುವವರೆಗೂ... ಮೌನವಾಗಿ ಯೋಚುಸ್ತಲೆ ಇದ್ವಿ. ಈಗ ನಾವು ಕಾಫಿ ಕಪ್ಪನ್ನ ಕೈಗೆತ್ತಿಕೊಂಡೆವು. ರಾಜನಳ್ಳಿ ಅವ್ವ ಬೇಲಿ ಸಾಲಿಗೆ ಹೋಗಿ ಕವಳಿನ ಗಂಟ ಉಗದು ಬಂದು 'ಕೊಡವ್ವ ಇಲ್ಲಿ' ಅಂದು ಕಾಫಿ ಕಪ್ಪಿಗೆ ಕೈ ಹಾಕ್ತು.

ಮೇಯ್ಕಬಂದ ದನಗಳು ಮನೆ ದಿಕ್ಕಿಗೆ ಬರತ ಇದ್ವು. ದನಗಳಿಗೂ ಎಷ್ಟೊಂದು ಬಣ್ಣ...



ಮಳೆಗಾಲದಲ್ಲಿ ಮುಳುಗಡೆಯಾಗಿ ಬೇಸಿಗೆಯಲ್ಲಿ ಕಾಣಿಸಿಕೊಳ್ಳುವ ಶೆಟ್ಟಿಹಳ್ಳಿ ಚರ್ಚ್